## ನಿವೇದನೆ

# ಸರ್ಕಾರಿ ಆಸ್ಪತ್ರೆಗಳಿಗೇ ಬೇಕಿದೆ ಆಮ್ಲಜನಕ!

ಒಂದೂವರೆ ವರ್ಷದ ಗಗನಾ ಎನ್ನುವ ಪುಟಾಣಿ ಸಕಾಲಕ್ಕೆ ವೆಂಟಿಲೇಟರ್ ಸೌಲಭ್ಯ ದೊರಕದೆ ಸಾವಿಗೀಡಾದ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಆಸ್ಪತ್ರೆಗಳು ಹಾಗೂ ವೈದ್ಯರುಗಳ ನಡುವಣ ಸಮನ್ವಯದ ಕೊರತೆಯನ್ನೂ ಸಾವಿನ ಕಾರಣಗಳಲ್ಲೊಂದಾಗಿ ಚರ್ಚಿಸಲಾಗುತ್ತಿದೆ. ಕಾರಣ ಏನೇ ಇದ್ದರೂ ಪುಟಾಣಿಯ ಸಾವು ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆಯ ಫಲ ಎನ್ನುವ ಕುರಿತು ಈ ಆಸ್ಪತ್ರೆಗಳನ್ನು ನೋಡಿ ಬಂದ ಯಾರಿಗೂ ಅನುಮಾನ ಇರಲಿಕ್ಕೆ ಸಾಧ್ಯವಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದೆಡೆ ಸೌಲಭ್ಯಗಳ ಕೊರತೆಯಾದರೆ, ಇನ್ನೊಂದೆಡೆ ಇರುವ ಸವಲತ್ತುಗಳು ರೋಗಿಗಳಿಗೆ ಎಟುಕದಿರುವ ವಿಪರ್ಯಾಸ. ನಗರಗಳ ದೊಡ್ಡ ಆಸ್ಪತ್ರೆಗಳಲ್ಲಿ ಉತ್ತಮ ಅನುಕೂಲಗಳಿದ್ದರೂ ಅವುಗಳು ಜನಸಾಮಾನ್ಯರಿಗೆ ಎಟುಕುವುದು ಅಷ್ಟು ಸುಲಭವಲ್ಲ. ಜವಾಬ್ದಾರಿಯನ್ನು ವರ್ಗಾಯಿಸುವುದರಲ್ಲಿ ಸರ್ಕಾರಿ ಆಸ್ಪತ್ರೆಗಳ ಸಿಬ್ಬಂದಿಗಳು ಒಬ್ಬರನ್ನೊಬ್ಬರು ಮೀರಿಸಬಲ್ಲಷ್ಟು ನಿಪುಣರು.

ಉಸಿರಾಟದ ತೀವ್ರ ತೊಂದರೆ ಇರುವ ರೋಗಿಗಳನ್ನು ಪ್ರಾಣಾಪಾಯದಿಂದ ಕಾಪಾಡಲು ವೆಂಟಿಲೇಟರ್‌ಗಳನ್ನು ಬಳಸಲಾಗುತ್ತದೆ. ಶಸ್ತ್ರಚಿಕಿತ್ಸೆ ಸಮಯದಲ್ಲಿ ಇವುಗಳ ಬಳಕೆ ಸಾಮಾನ್ಯ. ಆದರೆ, ಎಷ್ಟೋ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಜೀವರಕ್ಷಕ ಉಪಕರಣಗಳನ್ನು ಬಳಸಲು ಅರ್ಹರಾದ 'ಇಂಟೆನ್ಸಿವಿಸ್ಟ್' ತಜ್ಞರೇ ಇಲ್ಲ. ಅರಿವಳಿಕೆ ತಜ್ಞರು, ಇತರ ವೈದ್ಯರು ಹಾಗೂ ನುರಿತ ದಾದಿಯರೇ ವೆಂಟಿಲೇಟರ್‌ಗಳ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದಾರೆ. 'ಇಂಟೆನ್ಸಿವಿಸ್ಟ್'ಗಳಿಗೆ ದೊಡ್ಡ ಸಂಬಳ ನೀಡುವುದನ್ನು ತಪ್ಪಿಸಿಕೊಳ್ಳಲು ಸರ್ಕಾರ, ಹೆಚ್ಚಿನ ಹೊಣೆಯನ್ನು ಇತರ ವೈದ್ಯ ಸಿಬ್ಬಂದಿಯ ಮೇಲೆಯೇ ಹೇರಿದೆ. ಇದು ಸಿಬ್ಬಂದಿಯ ಶೋಷಣೆಯೂ ಹೌದು, ರೋಗಿಗಳ ಪ್ರಾಣದೊಂದಿಗೆ ಆಡುವ ಚೆಲ್ಲಾಟವೂ ಹೌದು. ಖಾಸಗಿ ಆಸ್ಪತ್ರೆಗಳಲ್ಲಿ ಜೀವರಕ್ಷಕಗಳ ಸವಲತ್ತು ಉತ್ತಮವಾಗಿದ್ದರೂ, ಅವುಗಳ ಸೇವೆ ದುಬಾರಿ. ಆ ಕಾರಣದಿಂದಾಗಿ ಆರ್ಥಿಕವಾಗಿ ಹಿಂದುಳಿದವರು ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸುವುದು ಅನಿವಾರ್ಯ.

ಪ್ರತಿ ವರ್ಷ ಸಾವಿರಾರು ಮಕ್ಕಳು ಹೆರಿಗೆ ಸಂದರ್ಭದಲ್ಲಿ ಸಾವನ್ನಪ್ಪುತ್ತಿರುವುದು ಕೂಡ ನಮ್ಮ ಸಾರ್ವಜನಿಕ ವೈದ್ಯಕೀಯ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಉದಾಹರಣೆಯಂತಿದೆ. ಗಾಳಿಬೆಳಕು, ಮಾನವೀಯತೆ ಎನ್ನುವುದು ಆಸ್ಪತ್ರೆಗಳ ಹೊರಗೇ ಉಳಿದಂತಿದ್ದು, ನೋವು– ಸಂಕಟಗಳಿಂದ ಆಸ್ಪತ್ರೆ ಪ್ರವೇಶಿಸುವ ರೋಗಿಗಳು ಅಲ್ಲಿನ ಬಿಗು ವಾತಾವರಣದಿಂದ ಮತ್ತಷ್ಟು ಅಧೀರರಾಗುವ ಪರಿಸ್ಥಿತಿ ಇದೆ. ವೆಂಟಿಲೇಟರ್‌ಗಳಷ್ಟೇ ಅಲ್ಲ, ಅನೇಕ ಆಸ್ಪತ್ರೆಗಳಲ್ಲಿ ತುರ್ತು ನಿಗಾ ಘಟಕ, ಹಾಸಿಗೆಗಳು, ಜೀವರಕ್ಷಕ ಔಷಧಿಗಳಂಥ ಮೂಲಭೂತ ಅನುಕೂಲಗಳೇ ಇಲ್ಲ. ಅಲ್ಲಿನ ಸ್ವಚ್ಛತೆಯಂತೂ ಲೋಕಪ್ರಸಿದ್ಧವಾದುದು! ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ 'ಸ್ವಚ್ಛ ಭಾರತ' ಅಭಿಯಾನ ಕೂಡ ಸರ್ಕಾರಿ ಆಸ್ಪತ್ರೆಗಳನ್ನು ಪ್ರವೇಶಿಸಲು ಸಾಧ್ಯವಾಗಿಲ್ಲ.


ಗ್ರಾಮೀಣ ಪ್ರದೇಶಗಳಲ್ಲಂತೂ ಸರ್ಕಾರಿ ಆಸ್ಪತ್ರೆಗಳ ಸ್ಥಿತಿ ಮತ್ತಷ್ಟು ದಾರುಣವಾಗಿದೆ. ಮೂಲಭೂತ ಸೌಲಭ್ಯಗಳ ಮಾತಿರಲಿ, ವೈದ್ಯರಿದ್ದರೆ ಜನರ ಪುಣ್ಯ ಎನ್ನುವಂತಾಗಿದೆ. ವೈದ್ಯರ ಬಳಿ ಚೀಟಿ ಬರೆಸಿಕೊಂಡು ಖಾಸಗಿ ಮೆಡಿಕಲ್ ಸ್ಟೋರ್‌ಗಳಿಗೆ ಎಡತಾಕುವುದು ಜನಸಾಮಾನ್ಯರಿಗೆ ಅಭ್ಯಾಸವಾಗಿದೆ. ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳ ವೈದ್ಯರು ಪಟ್ಟಣ– ನಗರಗಳಲ್ಲಿ ವಾಸಿಸುವುದು ಸಾಮಾನ್ಯ. ವಾರಕ್ಕೊಮ್ಮೆ ಸಹಿ ಮಾಡುವಷ್ಟಕ್ಕೆ ತಮ್ಮ ಕರ್ತವ್ಯ ಸೀಮಿತಗೊಳಿಸಿಕೊಂಡ, ಉಳಿದ ಸೇವೆಯನ್ನು ಖಾಸಗಿ ಆಸ್ಪತ್ರೆಗಳಿಗೆ ಮೀಸಲಿಟ್ಟ ವೈದ್ಯ ನಾರಾಯಣರೂ ಇದ್ದಾರೆ. ಇನ್ನು ಸರ್ಕಾರದ ಔಷಧಿಗಳು ಖಾಸಗಿ ಅಂಗಡಿಗಳಲ್ಲಿ ಮೋಕ್ಷ ಕಾಣುವ, ಕೆಲವೊಮ್ಮೆ ಕಸದಗುಂಡಿಗಳಲ್ಲಿ ಗೊಬ್ಬರವಾಗಿ ರೂಪಾಂತರಗೊಳ್ಳುವ ಪವಾಡಗಳ ಕುರಿತ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಲೇ ಇರುತ್ತವೆ.

ಸರ್ಕಾರ ಹಾಗೂ ಸರ್ಕಾರಿ ಆಸ್ಪತ್ರೆಗಳ ಸಿಬ್ಬಂದಿ ಒಂದು ಸೂಕ್ಷ್ಮವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಜನರು ಸರ್ಕಾರಿ ಆಸ್ಪತ್ರೆಗೆ ಹೋಗುವುದು ಅಲ್ಲಿನ ಸೌಲಭ್ಯಗಳು ಚೆನ್ನಾಗಿವೆ ಎನ್ನುವ ಕಾರಣಕ್ಕಲ್ಲ. ಚಿಕಿತ್ಸೆ ಪಡೆಯಲು ಬೇರೆ ಅವಕಾಶಗಳಿಲ್ಲದ ಹಾಗೂ ಆರ್ಥಿಕ ಚೈತನ್ಯವಿಲ್ಲದ ರೋಗಿಗಳಿಗೆ ಸರ್ಕಾರಿ ದವಾಖಾನೆಗಳಲ್ಲದೆ ಬೇರೆ ದಾರಿಯಿಲ್ಲ. ಇಂಥ ಅಸಹಾಯಕರ ಬಗ್ಗೆ ವ್ಯವಸ್ಥೆ ಅತ್ಯಂತ ಮಾನವೀಯವಾಗಿ ನೋಡಬೇಕು. ದುರ್ಬಲರಿಗೆ ಸೇವೆ ಒದಗಿಸುವುದು ಅವರಿಗೆ ಮಾಡುವ ಸಹಾಯವಾಗಿರದೆ, ತಮ್ಮ ಕರ್ತವ್ಯವಾಗಿದೆ ಎನ್ನುವುದನ್ನು ಸಾರ್ವಜನಿಕರ ಹಣದಿಂದ ಸಂಬಳ ಪಡೆಯುವ ವೈದ್ಯಕೀಯ ಸಿಬ್ಬಂದಿ ಅರ್ಥ ಮಾಡಿಕೊಳ್ಳಬೇಕು.

ಕೊಳಕುತನ, ಭ್ರಷ್ಟಾಚಾರ, ರೋಗಿಗಳ ಕುರಿತ ನಿರ್ಲಕ್ಷ್ಯ, ಔಷಧಿಗಳ ಅಲಭ್ಯತೆ ಹಾಗೂ ಸಿಬ್ಬಂದಿ ಕೊರತೆ ಸೇರಿದಂತೆ ಸರ್ಕಾರಿ ಆಸ್ಪತ್ರೆಗಳ ಕುರಿತ ದೂರುಗಳಿಗೆ ಕೊನೆಯೇ ಇಲ್ಲ ಎನ್ನಿಸುತ್ತದೆ. ಇವೆಲ್ಲವನ್ನೂ ಗಮನಿಸಿದರೆ, ಸರ್ಕಾರಿ ಆಸ್ಪತ್ರೆಗಳೇ ವೆಂಟಿಲೇಟರ್‌ನಲ್ಲಿ ಉಸಿರಾಡುತ್ತಿವೆ ಎನ್ನಿಸುತ್ತದೆ. ಮೊದಲು ಚಿಕಿತ್ಸೆ ದೊರಕಬೇಕಾದುದು ಈ ಆಸ್ಪತ್ರೆಗಳಿಗೆ ಹಾಗೂ ಅವುಗಳನ್ನು ನಿರ್ವಹಿಸುತ್ತಿರುವ ಸರ್ಕಾರಕ್ಕೆ. ಆನಂತರ ರೋಗಿಗಳ ಬಗ್ಗೆ ಯೋಚಿಸಬಹುದು.

■ ರಘುನಾಥ ಚ.ಹ.

ಕೊಳಕುತನ, ಭ್ರಷ್ಟಾಚಾರ, ರೋಗಿಗಳ ಕುರಿತ ನಿರ್ಲಕ್ಷ್ಯ, ಔಷಧಿಗಳ ಅಲಭ್ಯತೆ ಹಾಗೂ ಸಿಬ್ಬಂದಿ ಕೊರತೆ ಸೇರಿದಂತೆ ಸರ್ಕಾರಿ ಆಸ್ಪತ್ರೆಗಳ ಕುರಿತ ದೂರುಗಳಿಗೆ ಕೊನೆಯೇ ಇಲ್ಲ ಎನ್ನಿಸುತ್ತದೆ. ಇವೆಲ್ಲವನ್ನೂ ಗಮನಿಸಿದರೆ, ಸರ್ಕಾರಿ ಆಸ್ಪತ್ರೆಗಳೇ ವೆಂಟಿಲೇಟರ್‌ನಲ್ಲಿ ಉಸಿರಾಡುತ್ತಿವೆ ಎನ್ನಿಸುತ್ತದೆ. ಮೊದಲು ಚಿಕಿತ್ಸೆ ದೊರಕಬೇಕಾದುದು ಈ ಆಸ್ಪತ್ರೆಗಳಿಗೆ ಹಾಗೂ ಅವುಗಳನ್ನು ನಿರ್ವಹಿಸುತ್ತಿರುವ ಸರ್ಕಾರಕ್ಕೆ.



ಈಶ್ವರ್